ಬಾಗೇಪಲ್ಲಿ ಗುಡಿಬಂಡೆ ಪಿ.ಎಲ್.ಡಿ. ಬ್ಯಾಂಕಿನ ವಹಿವಾಟು

282 (292) ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ): ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕಿನ ಪಿ.ಎಲ್.ಡಿ. ಬ್ಯಾಂಕುಗಳ ವಹಿವಾಟುಗಳು ಸರಿಯಾಗಿರದೇ ಎರಡು ವರ್ಷದಿಂದ ಸಾಲ ಮರುಪಾವತಿಯಾಗದೇ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಸದರಿ ಬ್ಯಾಂಕಿನಿಂದ ಕಳೆದ ಎರಡು ವರ್ಷಗಳ ಹಿಂದಿನಿಂದ ಎಷ್ಟು ಮಂದಿ ಸದಸ್ಯರುಗಳಿಗೆ ಸಾಲವನ್ನು ನೀಡಲಾಗಿದೆ ; ಆ ಪೈಕಿ ವಸೂಲಿಯಾದ ಸಾಲದ ಹಣವೆಷ್ಟು ; (ವಿವರ ಒದಗಿಸುವುದು)

ಇ) ಸಾಲ ಮರುಪಾವತಿ ಮಾಡದ ಸದಸ್ಯರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):

ಅ) ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕಿನ ಪಿ.ಎಲ್.ಡಿ. ಬ್ಯಾಂಕುಗಳ ವಹಿವಾಟುಗಳು ಕಳೆದ ಎರಡು ವರ್ಷಗಳಿಂದ ಸಾಲ ಮರುಪಾವತಿಯಾಗದೆ ಸ್ಥಗಿತಗೊಂಡಿರುವುದಿಲ್ಲ.

ಆ) ಬಾಗೇಪಲ್ಲಿ ಮತ್ತು ಗುಡಿಬಂಡೆ ಪಿ.ಸಿ.ಎ.ಆರ್.ಡಿ. ಬ್ಯಾಂಕುಗಳ ಕಳೆದ 2 ವರ್ಷಗಳಲ್ಲಿ ವಿತರಿಸಿರುವ ಸಾಲದ ವಿವರ ಈ ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

ಪಿ.ಸಿ.ಎ.ಆರ್.ಡಿ. ಬ್ಯಾಂಕ್ ಹೆಸರು	2008–09ರಲ್ಲಿ ಸಾಲ ವಿತರಣೆ ವಿವರ				2009–10ರಲ್ಲಿ ಸಾಲ ವಿತರಣೆ ವಿವರ			
	ಫಲಾನುಭವಿಗಳ ಸಂಖ್ಯೆ	ಗುರಿ	ಸಾಧನೆ	ಗುರಿಗೆ ಶೇ.ವಾರು ಸಾಧನೆ	ಫಲಾನುಭವಿಗಳ ಸಂಖ್ಯೆ	ಗುರಿ	ಸಾಧನೆ	ಗುರಿಗೆ ಶೇ.ವಾರು ಸಾಧನೆ
ಬಾಗೇಪಲ್ಲಿ	48	112.50	80.14	71.23	26	81.00	80.11	98.90
ಗುಡಿಬಂಡೆ	55	112.50	87.58	77.84	52	121.00	113.74	94.00

ಬಾಗೇಪಲ್ಲಿ ಮತ್ತು ಗುಡಿಬಂಡೆ ಪಿ.ಎಲ್.ಡಿ. ಬ್ಯಾಂಕುಗಳ ಕಳೆದ 2 ವರ್ಷಗಳಲ್ಲಿ ಸಾಲ ವಸೂಲಾತಿ ವಿವರ ಈ ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

ಪಿ.ಸಿ.ಎ.ಆರ್.ಡಿ. ಬ್ಯಾಂಕ್ ಹೆಸರು	2008–09ರಲ್ಲಿ ಸಾಲ ವಸೂಲಾತಿ ವಿವರ				2009–10ರಲ್ಲಿ ಸಾಲ ವಸೂಲಾತಿ ವಿವರ			
	ತಗಾದೆ	ವಸೂಲಿ	ಬಾಕಿ	ಶೇ.ವಾರು ವಸೂಲಿ	ತಗಾದೆ	ವಸೂಲಿ	ಬಾಕಿ	ಶೇ.ವಾರು ವಸೂಲಿ
ಬಾಗೇಪಲ್ಲಿ	407.95	176.34	231.61	43.23	338.00	173.09	164.91	51.21
ಗುಡಿಬಂಡೆ	242.88	128.80	114.08	53.03	198.22	104.18	94.04	52.56

ಇ) ಸಾಲ ಮರುಪಾವತಿ ಮಾಡದ ಸದಸ್ಯರುಗಳಿಗೆ ಸಾಲ ಮರುಪಾವತಿ ಮಾಡುವಂತೆ ಮನವೊಲಿಸಲಾಗುವುದು. ಆದಾಗ್ಯೂ ಸಹ ಸಾಲ ಮರುಪಾವತಿ ಮಾಡದಿದ್ದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 70ರ ಪ್ರಕಾರ ದಾವೆ ಹೂಡಿ ಸಾಲ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತದೆ.

ತೋಟಗಾರಿಕಾ ಅಭಿವೃದ್ಧಿ

283 (583) ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ): ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆ ನಂದಿಬೆಟ್ಟದಲ್ಲಿರುವ ನಂದಿದಾಮ ತೋಟಗಾರಿಕೆಯ ಅಭಿವೃದ್ಧಿಗೆ ಸರ್ಕಾರವು ಖರ್ಚು ಮಾಡಿರುವ ಅನುದಾನ ಎಷ್ಟು ; ಆ ಪೈಕಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ; (ಕಳೆದ 2 ವರ್ಷಗಳ ವಿವರ ನೀಡುವುದು)

ಆ) ಈ ಹಣವನ್ನು ಯಾವ ಯಾವ ಕಾರ್ಯಗಳಿಗೆ ವಿನಿಯೋಗಿಸಲಾಗಿದೆ ; (ವಿವರ ನೀಡುವುದು)

ಇ) ಈ ನಂದಿಧಾಮದಲ್ಲಿ ಇರುವಂತಹ ತೋಟಗಾರಿಕೆಯ ಒಟ್ಟು ಮರಗಳ ಮತ್ತು ಸಸಿಗಳ ಸಂಖ್ಯೆ ಎಷ್ಟು ; ಇದನ್ನು ಬೆಳೆಸಲು ಸಂರಕ್ಷಿಸಲು ಈಗಾಗಲೇ ಖರ್ಚು ಮಾಡಿರುವ ಹಣ ಎಷ್ಟು ;

ಈ) ಈ ಸದರಿ ಧಾಮದಲ್ಲಿನ ವಿವಿಧ ಜಾತಿಯ ಗಿಡ ಮರಗಳ ಸಂಖ್ಯೆ ಎಷ್ಟು ; ಅವು ಯಾವುವು ; (ವಿವರ ಒದಗಿಸುವುದು)